ಹಾಕಿಲ್ಲ. ನಿಮ್ಮಪ್ಪ ಹಾಕಿದ್ರೆ ಹೇಳು ಫಸ್ಟ್ ಕ್ಲಾಸಿನಲ್ಲೇ ಹೋಗಿಬರೋಣ' ಎಂದರು. ರೇಗುವುದಿಲ್ಲವೇ? ಚೆನ್ನಾಗಿಯೇ ರೇಗಿದೆ. ವಾಗ್ವಾದ ನಡೆದು ಕಡೆಗೆ ಒಂದು ಒಪ್ಪಂದಕ್ಕೆ ಬಂದೆವು. 'ನನಗೂ ಬೇಡ ನಿನಗೂ ಬೇಡ ಚೆನ್ನೈನಿಂದ ಬೆಂಗಳೂರಿಗೆ ಸೆಕೆಂಡ್ ಕ್ಲಾಸ್, ಬೆಂಗಳೂರಿನಿಂದ ಚೆನ್ನೈಗೆ ಫಸ್ಟ್ ಕ್ಲಾಸ್ ಪ್ರಯಾಣಿಸೋಣ' ಎಂದರು. ಸಿಕ್ಕಿದ್ದೇ ಸೀರುಂಡೆ ಎಂದು ನಾನೂ ಒಪ್ಪಿದೆ.

ಬೆಂಗಳೂರಿನಲ್ಲಿ ಮದುವೆ ಸಾಂಗವಾಗಿ ನೆರವೇರಿತು. ಎರಡು ದಿನವೂ ಮೂರುವೇಳೆ ಮದುವೆಯ ವೈಭೋಗ ಉಂಡು ಹೊಟ್ಟೆ ಕೆಟ್ಟು ವೈದ್ಯನಾರಾಯಣನ ಉಪಚಾರ ಪಡೆದದ್ದೂ ಆಯಿತು.

ಹೆಣ್ಣು ತೌರುಮನೆಗೆ ಬಂದಾಗ ಮಡಿಲುತುಂಬಿ ಎರಡೂ ಕೈತುಂಬ ಸಾಮಾನು ಸರಂಜಾಮು ಕೊಟ್ಟು ಕಳುಹಿಸುವುದು ನಮ್ಮ ಪರಂಪರೆ. ಎರಡು ಚಿಕ್ಕ ಸೂಟ್ಕೇಸಿನೊಂದಿಗೆ ಬಂದಿದ್ದ ನಾವು ಹೊರಟಾಗ ಒಂದು ಅವರೇಕಾಯಿ ತುಂಬಿದ್ದ ಬುಟ್ಟಿ, ಚಟ್ನಿಪುಡಿ, ಸಾಂಬಾರ್‌ಪುಡಿ, ಉಪ್ಪಿನಕಾಯಿ, ಹುಣಸೇತೊಕ್ಕು, ಹಪ್ಪಳಸಂಡಿಗೆ ಇತ್ಯಾದಿ ಇತ್ಯಾದಿಗಳು ತುಂಬಿದ್ದ ಎರಡು ಗೋಣೀಚೀಲಗಳು ಬಳುವಳಿಯಾಗಿ ಬಂದವು. ಎಲ್ಲವನ್ನೂ ಹೊತ್ತು ಆಟೊವಿನಲ್ಲಿ ಸ್ಟೇಷನ್ ಬಳಿ ಇಳಿದಾಗ ಗಿರಾಕಿಗಳಿಗಾಗಿ ಸಾಲಾಗಿ ಕಾದುನಿಂತಿದ್ದ ಕೂಲಿಯವರು ನಮ್ಮ ಬುಟ್ಟಿಚೀಲಗಳತ್ತ ಕಣ್ಣು ಹಾಯಿಸಿ ಜಿಗುಪ್ಸೆಯಿಂದ ಮುಖತಿರುವಿದರು. ನಾವೇ ಕಷ್ಟಪಟ್ಟು ಹೊತ್ತೋ ಎಳೆಯುತ್ತಲೋ ಫಸ್ಟ್ ಕ್ಲಾಸ್ ಡಬ್ಬಿಯತ್ತ ಬಂದಾಗ ಇಬ್ಬರಿಗೂ ಮೇಲುಸಿರು! ಬಾಗಿಲ ಪಕ್ಕ ಅಂಟಿಸಿದ್ದ ಅಂದಿನ ಪ್ರಯಾಣಿಕರ ಪಟ್ಟಿಯತ್ತ ಕಣ್ಣಾಡಿಸಿದೆವು. ಒಮ್ಮೆ, ಮತ್ತೊಮ್ಮೆ, ಮಗದೊಮ್ಮೆ. ಊಹೂಂ, ನಮ್ಮ ಹೆಸರು ಅಲ್ಲಿರಲೇ ಇಲ್ಲ. ಹೀಗಾದಾಗ ನಮ್ಮವರು ಸುಮ್ಮನಿರುವ ಪೈಕಿ ಅಲ್ಲವೇ ಅಲ್ಲ. ರೈಲಿನವರ ಕಾರ್ಯವೈಖರಿ ಅದಕ್ಷತೆಯ ಬಗ್ಗೆ ಗಟ್ಟಿಯಾಗಿಯೇ ಗೊಣಗಿಕೊಂಡರು. ಸುತ್ತಮುತ್ತ ಕೆಲಸವಿಲ್ಲದೇ ಸುತ್ತುತ್ತಿದ್ದ ಹಲವು ಮಂದಿ ಏನು ಎತ್ತ ಎಂದು ವಿಚಾರಿಸುತ್ತ ಸುತ್ತ ನೆರೆದರು. ಆಗ ನನ್ನ ಗಂಡನ ಗೊಣಗಾಟ ಭಾಷಣದ ಸ್ವರೂಪ ಪಡೆಯಿತು.

'ಏನ್ಸಾರ್ ಗಲಾಟೆ?' ರೈಲು ನಿರ್ವಾಹಕ ವಿಚಾರಿಸಲು ಬಂದ. ನಮ್ಮವರು ಚೆನ್ನಾಗಿಯೇ ತಗಲಿಕೊಂಡರು.

'ಏನ್ರೀ? ತಿಂಗಳಿಗೂ ಮುನ್ನ ಟಿಕೆಟ್ ಬುಕ್ ಮಾಡಿದ್ದೀನಿ. ಇಲ್ಲಿ ನೋಡಿದ್ರೆ ಹೆಸರೇ ಇಲ್ವಲ್ರೀ? ಎಲ್ಲಿ ನುಂಗಿಬಿಟ್ಟಿದೀರ? ಪ್ರತಿ ಬಡ್ಜೆಟ್ಟಿಗೆ ಶುಲ್ಕ ಮಾತ್ರ ತಪ್ಪದೇ ಏರಿಸ್ತೀರಿ. ಸ್ವಲ್ಪವೂ ದಕ್ಷತೆ ಬೇಡ್ವೇನ್ರೀ?'

'ಸ್ವಲ್ಪ ಸಮಾಧಾನವಾಗಿರಿ ಸಾರ್. ಏನಾಗಿದೆ ಯಾಕಾಗಿದೆ ಅಂತ ನೋಡ್ತೀನಿ' ಎಂದು ನಮ್ಮ ಹೆಸರು ಕೇಳಿಕೊಂಡು ಎರಡೆರಡುಬಾರಿ ತನ್ನ ಪಟ್ಟಿ ನೋಡಿಕೊಂಡ. ತಲೆ ಕೆರೆದುಕೊಂಡ. ತಲೆಕೆರೆತದಿಂದ ಏನೋ ಹೊಳೆಯಿತೇನೋ, 'ಸಾರ್ ನಿಮ್ಮ ಟಿಕೆಟ್ ಕೊಡಿ' ಎಂದ ವಿನಯದಿಂದ. ಟಿಕೆಟ್ ನೋಡಿದೊಡನೆ ಅವನ ಚಹರೆಯೇ ಬದಲಾಗಿಬಿಡ್ತು. ಕ್ರಾಪ್ ಸರಿಮಾಡಿಕೊಂಡ. ಕೋಟಿನ ಕಾಲರ್ ನೇರವಾಗಿಸಿದ. ಕೆಳಕ್ಕೆ ಬಾಗಿದ್ದ ಮೀಸೆ ಮೇಲೆತ್ತಿದ. ಕೆಮ್ಮಿ ಗಂಟಲು ಸರಿಮಾಡಿಕೊಂಡ. ಸಮರಕ್ಕೆ ಸಿದ್ಧನಾದ!

'ಇದ್ಯಾವತ್ತಿನ ಟಿಕೆಟ್ ನೋಡ್ರೀ' ಗರ್ಜಿಸಿದ.

'ನೋಡೋದ್ಯಾಕೆ? ಅಷ್ಟು ಗೊತ್ತಿಲ್ವೇ. ಎಂಟನೇ ತಾರೀಖಿನದು' ನನ್ನವರ ಧ್ವನಿ ಮರು ಗರ್ಜಿಸಿತು.